ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ.

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ICAR

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
Quarterly News Letter
ಅಕ್ಟೋಬರ್-ಡಿಸೆಂಬರ್ 2011

ಮಿಂಚಂಚೆ: dvgtkvk@yahoo.com
Website:www.taralabalukvk.com
ಸಂಪುಟ- 5 ಸಂಚಿಕೆ- 1

## ಸಿಂಚನಕ್ಕೆ ಮುನ್ನ........

**ಸಹೃದಯ ಬಂಧುಗಳೇ,**

ಹೊಸ ವರ್ಷ ಆರಂಭವಾಗಿದೆ (2012), ನಾವು - ನೀವು ಅಂದುಕೊಂಡ ಒಳ್ಳೆಯ ಕೆಲಸಗಳೆಲ್ಲ ಸಫಲವಾಗಲಿ. ಈ ಬಾರಿ ಹಿಂಗಾರಿನ ಮಳೆ ಕೈಕೊಟ್ಟಿತು ಆದ್ರೆ, ಚಳಿ ಮಾತ್ರ ಅಡಿಯಿಂದ ಮುಡಿಯವರೆಗೆ ಮೂಳೆ ತಟ್ಟಿತು. **"ವಿಶ್ವ ಆಹಾರ ದಿನಾಚರಣೆ"** ಯನ್ನು ಕೃಷಿ ಇಲಾಖೆಯ ಸಹಯೋಗದಲ್ಲಿ ಮಹಿಳಾ ರೈತರೊಂದಿಗೆ ಅಕ್ಟೋಬರ್ 13 ರಂದು ಕೇಂದ್ರದಲ್ಲೆ ಆಚರಿಸಿದ್ದು ವಿಶೇಷವಾಗಿತ್ತು. ಅಂದು "ಆಹಾರದ ಬೆಲೆಗಳು- ಸ್ಥಿರತೆಯಡೆಗೆ" ಎಂಬ ವಾರ್ಷಿಕ ವಿಷಯದ ಕುರಿತು ಚರ್ಚೆ ನಡೆಸಲಾಯ್ತು. ಆಹಾರ ಸುರಕ್ಷತೆಯ ಜೊತೆಗೆ ಪೋಷಕಾಂಶಗಳ ಸುರಕ್ಷತೆಯ ಅಗತ್ಯತೆಯನ್ನು ಭಾಗವಹಿಸಿದವರೆಲ್ಲರಿಗೂ ಮನವರಿಕೆ ಮಾಡಲಾಯ್ತು.

" **ಕೃಷಿಯಲ್ಲಿ ಮಹಿಳೆ ದಿನಾಚರಣೆ**" ಯನ್ನು ಸಿದ್ದನೂರಿನಲ್ಲಿ ಬಹಳ ವಿಶೇಷವಾಗಿ ಹಮ್ಮಿಕೊಳ್ಳಲಾಗಿತ್ತು. ಸುಮಾರು 200 ಮಹಿಳೆಯರು ಒಂದೆಡೆ ಸೇರಿ ಕೃಷಿ ಬಗ್ಗೆ ಚರ್ಚೆ, ಹಾಡು, ಆಟೋಟಗಳ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದು ಸಂತಸದ ವಿಚಾರವಾಗಿತ್ತು. ಕೊಡದಗುಡ್ಡದಲ್ಲಿ ನಡೆದ **'ರೈತ ಸನ್ಮಾನ ದಿನವನ್ನು'** ಕೃಷಿ ಇಲಾಖೆಯೊಂದಿಗೆ ಕೈಜೋಡಿಸಿ ಆಚರಿಸಲಾಯ್ತು. ಗುಡ್ಡದ ಮೇಲಿನ ದೇವಸ್ಥಾನದಲ್ಲಿ ರೈತರ ಅಭಿವೃದ್ಧಿ ಹೆಚ್ಚಾಗಲಿ, ಅದರ ಬಗ್ಗೆ ಸಮಾಜಕ್ಕೆ ಹೆಚ್ಚಿನ ಕಾಳಜಿ ಇರಲಿ ಎಂದು ಹಾರೈಸಲಾಯ್ತು.

ಮಧ್ಯಪ್ರದೇಶದ ಜಬಲ್‌ಪುರದಲ್ಲಿ ನಡೆದ 6ನೇ ಕೃಷಿ ವಿಜ್ಞಾನ ಕೇಂದ್ರದ ರಾಷ್ಟ್ರೀಯ ಸಮ್ಮೇಳನದಲ್ಲಿ ಡಾ. ಕೆ.ಪಿ. ಬಸವರಾಜ್ ರವರೊಂದಿಗೆ ಭಾಗವಹಿಸಿದ್ದು, ಆಸಕ್ತಿಯುತ ಶೈಕ್ಷಣಿಕ ಅನುಭವವಾಗಿತ್ತು. 3 ದಿನಗಳಂದು ಕೊಯ್ಲೋತ್ತರ ಕೃಷಿ ಪ್ರಕ್ರಿಯೆಗಳಲ್ಲಿ ರೈತರ ಅಭ್ಯುದಯವಿದೆ ಎನ್ನುವ ವಿಚಾರವಾಗಿ ಗೋಷ್ಠಿಗಳನ್ನು ಡಾ. ಎಸ್. ಅಯ್ಯಪ್ಪನ್, ಡಿ.ಜಿ. ಐ.ಸಿ.ಎ.ಆರ್. ರವರ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು.

ಈ ಋತುವಿನಲ್ಲಿ ಅಡಿಕೆ ಬೆಳೆಗಿರುವ ಅನೇಕ ಸಮಸ್ಯೆಗಳ ಬಗ್ಗೆ ರೈತರ ಕೋರಿಕೆ ಮೇರೆಗೆ ಹೆಚ್ಚಿನ ತೋಟಗಳಿಗೆ ನಮ್ಮ ತಜ್ಞರುಗಳು ಭೇಟಿ ನೀಡಿ, ನಿರ್ವಹಣಾ ಕೃಷಿ ತಂತ್ರಜ್ಞಾನ ಕುರಿತು ಮಾಹಿತಿ ನೀಡಿರುತ್ತಾರೆ. "ನಿಕ್ರಾ" ಯೋಜನೆಯ ಸಿದ್ದನೂರಿನ 40 ಜನ ರೈತ-ರೈತ ಮಹಿಳೆಯರನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ದದ್ದು ಈ ಋತುವಿನ ಮತ್ತೊಂದು ಆಕರ್ಷಣೆ. ತಿಪಟೂರಿನ ಲಕ್ಕಿಹಳ್ಳಿಯಲ್ಲಿರುವ ಬೈಫ್ ಸಂಸ್ಥೆಗೆ ಭೇಟಿ, ಮೈಲನಳ್ಳಿ ಜಲಾನಯನದ ತಿಮ್ಮಣ್ಣನೊಂದಿಗೆ ರಸವತ್ತಾದ ಸಂವಾದ, ಸಂತೆಶಿವರದ ಬಸವರಾಜಣ್ಣನ ಸಹಜ ಕೃಷಿಯ ತೋಟ ಇವೆಲ್ಲವೂ ನಮ್ಮ ರೈತ ಪ್ರವಾಸಿಗರಿಗೆ ವಿನೂತನ ಅನುಭವವನ್ನೆ ನೀಡಿದವು. ಮುಂದುವರಿದು, ಇದೇ ಪ್ರವಾಸದ ಕೊನೆಭಾಗದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಮೇಳವನ್ನು ನೋಡಿದ್ದು ತುಂಬಾ ಚೆನ್ನಾಗಿತ್ತು. ಪೂಜ್ಯ ತರಳಬಾಳು ಜಗದ್ಗುರುಗಳು ಸಿರಿಗೆರೆಯಲ್ಲಿ ನಡೆಯುವ ಸಂಸ್ಥೆಯ ಮಾಸಿಕ ಸಭೆಯಲ್ಲಿ ಕೆವಿಕೆ ಕೆಲಸ ಮಾಡುತ್ತಿರುವ (ಪ್ರತಿ ತಿಂಗಳು) ಒಂದು ಹಳ್ಳಿಯ ರೈತರೊಂದಿಗೆ ಸಂವಾದ ನಡೆಸುವ ವಿನೂತನ ಸಂಪ್ರದಾಯಕ್ಕೆ ಆಶೀರ್ವದಿಸಿದ್ದಾರೆ. ಇದು ನಮ್ಮ ರೈತರಲ್ಲಿ ಹೊಸ ಹುರುಪನ್ನು ಮೂಡಿಸಿರುವುದು ನಿಚ್ಚಳ.

ನವೆಂಬರ್‌ನಲ್ಲಿ ಧಾರವಾಡದ ಕೃಷಿ ಮಾಧ್ಯಮ ಕೇಂದ್ರದವತಿಯಿಂದ ನಡೆಸುವ ಕೃಷಿ ಪತ್ರಿಕೋದ್ಯಮ ವಾರ್ಷಿಕ ತರಬೇತಿಯ ಉದ್ಘಾಟನಾ ಶಿಬಿರದಲ್ಲಿ ಭಾಗವಹಿಸುವ ಅವಕಾಶ ಒದಗಿತ್ತು. ಇದು ನಡೆದಿದ್ದು ಡಾ ಸಂಜೀವ ಕುಲಕರ್ಣಿಯವರ 'ಸುಮನ ಸಂಗಮ' ಕಾಡುತೋಟದಲ್ಲಿ. ಅದೊಂದು ವಿಶಿಷ್ಟ ಅನುಭವ. ವರ್ಷದ ಕೊನೆ ಭಾಗದಲ್ಲಿ ಜೈವಿಕ ತಂತ್ರಜ್ಞಾನ ಇಲಾಖೆ ಪ್ರಾಯೋಜಿತ ಯೋಜನೆಯ ಎರಡನೇ ವರ್ಷದ ಪ್ರಗತಿ ವರದಿಯನ್ನು ತಯಾರಿಸಿ ನೀಡಿದ್ದೇವೆ. ಈ ಪತ್ರಿಕೆ ನಿಮ್ಮ ಕೈ ಸೇರುವಾಗ, ದೆಹಲಿಯಲ್ಲಿ ಅದನ್ನು ಮಂಡಿಸಿ ವಾಪಾಸ್ಸಾಗಿರುತ್ತೇನೆ. ಬರುವ 2012 ರ ಫೆಬ್ರವರಿ 21 ರಂದು ನಮ್ಮ ಕೆವಿಕೆ ಕಟ್ಟಡ ಸಮುಚ್ಛಯದ ಉದ್ಘಾಟನಾ ಸಮಾರಂಭ ನೆರವೇರಲಿದೆ. ಇದು ಮುಂಗಡ ಆಹ್ವಾನ ಪತ್ರ.

ಓಕೆ, ಓಕೆ, ಅದರ ತಯಾರಿಯ ಕೆಲಸಗಳು ಬಹಳ ಇರುವುದರಿಂದ, ಸಧ್ಯಕ್ಕೆ ನಿಮ್ಮ ಹಾರೈಕೆಗಳನ್ನು ತೆಗೆದುಕೊಂಡು ಶುಭಕೋರುತ್ತೇನೆ. ನಮಸ್ತೆ.

**-ಡಾ. ದೇವರಾಜ್ ಟಿ.ಎನ್.**



ದಿನಾಂಕ 21-12-2011 ರಂದು ಶ್ರೀ ಸಂದೀಪ್ ದಾವೆ, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಸಚಿವಾಲಯ, ಕರ್ನಾಟಕ ಸರ್ಕಾರ ಇವರು ಕೇಂದ್ರಕ್ಕೆ ಭೇಟಿ ನೀಡಿ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಿದರು.




ದಿನಾಂಕ 20-12-2011 ರಂದು ಚನ್ನಗಿರಿ ತಾಲ್ಲೂಕು ದೇವರಹಳ್ಳಿ ಗ್ರಾಮದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆಗೆ ರೈತರ ಆಯ್ಕೆಗೆ ಗುಂಪು ಚರ್ಚೆ ಹಮ್ಮಿಕೊಳ್ಳಲಾಗಿತ್ತು.

ಮಾತೃ ಸಂಸ್ಥೆ: ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ-577541, ಚಿತ್ರದುರ್ಗ ತಾ. ದೂರವಾಣಿ: 08192-268829, ಮಿಂಚಂಚೆ: trdf@taralabalu.org



ದಿನಾಂಕ 5-12-2011 ರಂದು ದಾವಣಗೆರೆ ತಾಲ್ಲೂಕು ಸಿದ್ದನೂರು ಗ್ರಾಮದಲ್ಲಿ ನಿಕ್ರಾ ಯೋಜನೆಯಡಿಯಲ್ಲಿ **"ಕೃಷಿಯಲ್ಲಿ ಮಹಿಳೆ ದಿನಾಚರಣೆ"** ಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಮಹಿಳೆಯರಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು ಮತ್ತು ವಿಜೇತರಿಗೆ ಬಹುಮಾನ ವಿತರಿಸಲಾಯಿತು.



ದಿನಾಂಕ 1-12-2011 ರಂದು ಸಿದ್ದನೂರು ಗ್ರಾಮದ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ನಿಕ್ರಾ ಯೋಜನೆಯಡಿ ಅಗರಬತ್ತಿ ತಯಾರಿಕಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 17-10-2011 ರಂದು ಕೇಂದ್ರದಲ್ಲಿ ಕೃಷಿ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ 'ವಿಶ್ವ ಆಹಾರ ದಿನಾಚರಣೆ' ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಜಂಟಿ ಕೃಷಿ ನಿರ್ದೇಶಕರಾದ ಡಾ. ಆರ್. ಜಿ. ಗೊಲ್ಲರ್ ಭಾಗವಹಿಸಿದ್ದರು.

## ಅಧ್ಯಯನ ಪ್ರವಾಸಗಳು



ದಿನಾಂಕ 16-17 ನವೆಂಬರ್ 2011 ರಂದು ನಿಕ್ರಾ ಯೋಜನೆಯಡಿಯಲ್ಲಿ ಭೈಫ್ ಸಂಸ್ಥೆ, ತಿಪಟೂರು, ಜಲಾನಯನ ಅಭಿವೃದ್ಧಿ ಇಲಾಖೆ, ಮೈಲನಳ್ಳಿ, ಸಾವಯವ ಕೃಷಿ ತೋಟ, ಸಂತೇಶಿವರ ಮತ್ತು ರಾಷ್ಟ್ರೀಯ ಕೃಷಿ ಮೇಳ, ಬೆಂಗಳೂರಿಗೆ ರೈತರ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 12 ನವಂಬರ್ 2011 ರಂದು ನಿಕ್ರಾ ಯೋಜನೆಯಡಿಯಲ್ಲಿ ದಾರವಾಡ ಜಿಲ್ಲೆ ಅರೆಕುರೆಹಟ್ಟಿಗೆ ಬೇಟಿ ನೀಡಿ ಟ್ರಾಕ್ಟರ್ ಚಾಲಿತ ಬಿತ್ತನೆಯಂತ್ರ ಪರಿಕ್ಷಿಸುತ್ತಿರುವುದು.



ದಿನಾಂಕ 12 ನವೆಂಬರ್ 2011 ರಂದು ದಾರವಾಡ ತಾ॥ ಸುಮನಸಂಗಮ ಕಾಡು ತೋಟದಲ್ಲಿ "ಕೃಷಿ ಪತ್ರಿಕೋದ್ಯಮ" ತರಬೇತಿಯಲ್ಲಿ ಕೇಂದ್ರದ ತಜ್ಞರು ಭಾಗವಹಿಸಿದ್ದರು.

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು

| ದಿನಾಂಕ | ಶೀರ್ಷಿಕೆ | ರೈತರ ಸಂಖ್ಯೆ | ಪ್ರಾಯೋಜಕರು |
|---|---|---|---|
| 11-13 ಅಕ್ಟೋಬರ್ 2011 | ನೀರುಗಂಟಿಗಳಿಗೆ ಕೆರೆ ನೀರು ನಿರ್ವಹಣಾ ತರಬೇತಿ | 30 | ಸಿ.ಬಿ.ಟಿ.ಎಂ.ಪಿ.ಸಿ.ಎಸ್, ಕೃ.ವಿ.ವಿ., ಬೆಂಗಳೂರು |
| 18-19 ಅಕ್ಟೋಬರ್ 2011 | ರೈತರಿಗೆ ಪರಿಸರ ನಿರ್ವಹಣಾ ತರಬೇತಿ | 30 | ಸಿ.ಬಿ.ಟಿ.ಎಂ.ಪಿ.ಸಿ.ಎಸ್, ಕೃ.ವಿ.ವಿ., ಬೆಂಗಳೂರು |
| 21-22 ಅಕ್ಟೋಬರ್ 2011 | ರೈತರಿಗೆ ಪರಿಸರ ನಿರ್ವಹಣಾ ತರಬೇತಿ | 30 | ಸಿ.ಬಿ.ಟಿ.ಎಂ.ಪಿ.ಸಿ.ಎಸ್, ಕೃ.ವಿ.ವಿ., ಬೆಂಗಳೂರು |
| 21-23 ಡಿಸೆಂಬರ್ 2011 | ನೀರುಗಂಟಿಗಳಿಗೆ ಕೆರೆ ನೀರು ನಿರ್ವಹಣಾ ತರಬೇತಿ | 30 | ಸಿ.ಬಿ.ಟಿ.ಎಂ.ಪಿ.ಸಿ.ಎಸ್, ಕೃ.ವಿ.ವಿ., ಬೆಂಗಳೂರು |
| 10-15 ಅಕ್ಟೋಬರ್ 2011 | ಸುಧಾರಿತ ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ | 57 | ಎಸ್. ಜಿ. ಎಸ್. ವೈ. ಯೋಜನೆ ಜಿ. ಪಂ. ದಾವಣಗೆರೆ |
| 17-22 ಅಕ್ಟೋಬರ್ 2011 | ಸುಧಾರಿತ ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ ಪರಿಣಿತ ತರಬೇತಿ | 45 | ಎಸ್. ಜಿ. ಎಸ್. ವೈ. ಯೋಜನೆ ಜಿ. ಪಂ. ದಾವಣಗೆರೆ |







ಕೇಂದ್ರವು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು ಸಹಯೋಗದಲ್ಲಿ, " ಮೆಕ್ಕೆಜೋಳದಲ್ಲಿ ಕೊಯ್ಲೋತ್ತರ ತಾಂತ್ರಿಕತೆಗಳು ಮತ್ತು ಮಾರುಕಟ್ಟೆ " ವಿಷಯದಲ್ಲಿ ಹಾಲುವರ್ತಿ ಮತ್ತು ಸಿದ್ದನೂರಿನಲ್ಲಿ ತರಬೇತಿ ಹಮ್ಮಿಕೊಳ್ಳಲಾಗಿತ್ತು.

## ವೈಜ್ಞಾನಿಕ ಕ್ಷೇತ್ರ ಭೇಟಿ



ವಿಸ್ತರಣಾ ಶಿಕ್ಷಣ ಘಟಕ ಕತ್ತಲಗೆರೆ, ತೋಟಗಾರಿಕಾ ಇಲಾಖೆ, ಚನ್ನಗಿರಿ ಹಾಗೂ ಕೇಂದ್ರದ ತಜ್ಞರುಗಳು ಬೆಂಗಳೂರು ಕೃ.ವಿ.ವಿ.ಆಡಳಿತ ಮಂಡಳಿ ಸದಸ್ಯರಾದ ಶ್ರೀ ರಾಜಪ್ಪನವರ ಹಿಡಿಮುಂಡಿಗೆ ಬಾದಿತ ಅಡಿಕೆ ತೋಟಕ್ಕೆ ಭೇಟಿ ನೀಡಿ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.



ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ದ್ವೈಮಾಸಿಕ ಕಾರ್ಯಗಾರದ ಸಂದರ್ಭದಲ್ಲಿ ಸಮಸ್ಯಾತ್ಮಕ ಸೂರ್ಯಕಾಂತಿ ತಾಕುಗಳಿಗೆ ಇಲಾಖೆಯ ವಿಸ್ತರಣಾ ಅಧಿಕಾರಿಗಳೊಂದಿಗೆ ಕೇಂದ್ರದ ತಜ್ಞರು ಭೇಟಿಯಿತ್ತು ಮಾಹಿತಿ ನೀಡಿದರು



ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್‌ನ ಆಡಳಿತ ಮಂಡಳಿ ಸದಸ್ಯರುಗಳು ಮತ್ತು ಕೇಂದ್ರದ ತಜ್ಞರುಗಳು ಇ.ಬೇವಿನಹಳ್ಳಿ ಗ್ರಾಮದ ಶ್ರೀ ಬಿ.ಎಂ. ಶಿವಯೋಗಿಯವರ "ಶ್ರೀ ಅನ್ನಪೂರ್ಣೇಶ್ವರಿ ಸಾವಯವ ಕೃಷಿ ಫಾರಂಗೆ" ಭೇಟಿ ನೀಡಿ ಅಧ್ಯಯನ ನಡೆಸಿದರು.

## ಹಮ್ಮಿಕೊಂಡ ಕ್ಷೇತ್ರೋತ್ಸವಗಳು



ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ (NAH-1137)



ಹತ್ತಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ



ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ ರೈತ ಕ್ಷೇತ್ರ ಪಾಠಶಾಲೆ (NAH-2049)



ರಾಗಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ (GPU-28)

## ಕೃಷಿ ಮುನ್ಸೂಚನೆಗಳು

**ಮೀನು ಕೃಷಿ:**

- ಹಾಲಿ ಮೀನು ಕೃಷಿ ಚಾಲ್ತಿಯಲ್ಲಿರುವ ಕೊಳಗಳಲ್ಲಿ ರೈತರು ಸ್ವಲ್ಪ ಮಟ್ಟಿಗೆ ಹೊಸ ನೀರನ್ನು ತುಂಬಿಸುವುದು ಒಳ್ಳೆಯದು. ಚಳಿ ಮತ್ತು ಉಷ್ಣತೆ ಎರಡೂ ಏರಿಕೆಯಲ್ಲಿರುವ ಈ ಋತುವಿನಲ್ಲಿ ಆಮ್ಲಜನಕ ಕೊರತೆಯು ಆಗಾಗ ಮುಂಜಾವಿನ ಘಳಿಗೆಯಲ್ಲಿ ಕಂಡು ಬರುವ ಸಾಧ್ಯತೆಯಿದ್ದು, ಮೀನುಗಳಿಗೆ ಉಸಿರಾಟಕ್ಕೆ ತೊಂದರೆ ಆಗಬಹುದು. 5–10 % ಹಳೆ ನೀರು ತೆಗೆದು ಅದೇ ಪ್ರಮಾಣದಲ್ಲಿ ಹೊಸ ನೀರನ್ನು ಸೇರಿಸುವುದರಿಂದ ಇದನ್ನು ನಿರ್ವಹಿಸಬಹುದು.
- ಅಕ್ಕಿ ತೌಡು ಮತ್ತು ಶೇಂಗಾ ಹಿಂಡಿ ಜೊತೆಗೆ ಸ್ವಲ್ಪ ಹಸಿರು ಎಳೆ ಹುಲ್ಲುಗಳ ಎಸಳನ್ನು ಊಟವಾಗಿ ಮೀನುಗಳಿಗೆ ನೀಡಬಹುದು.
- ಹೊಸದಾಗಿ ಮೀನು ಕೃಷಿ ಕೈಗೊಳ್ಳುವವರು, ಕೃಷಿ ಹೊಂಡಗಳಿದ್ದಲ್ಲಿ ಕೆಲ ತಯಾರಿಗಳನ್ನು ಮಾಡಿಕೊಳ್ಳಬೇಕು. ಕಸಕಡ್ಡಿಗಳು, ಅನಗತ್ಯ ಸಸ್ಯ ಮೀನುಗಳಿದ್ದಲ್ಲಿ ತೆಗೆದುಹಾಕಬೇಕು. 1 ಗುಂಟೆ ಹೊಂಡಕ್ಕೆ 5–10 ಕೆಜಿ ಸುಣ್ಣದ ಪುಡಿ ಎರಚಿ, ನೀರಿನ ರಸಸಾರವನ್ನು ಸರಿತೂಗಿಸಬೇಕು (7.5 ರಸಸಾರ), 20–30 ಕೆಜಿ ದನದ ಸಗಣಿಯನ್ನು ನೀರು ಮಾಡಿ ಚೆಲ್ಲಬೇಕು. ನಂತರ, ಒಂದು ವಾರದಲ್ಲಿ ಆಹಾರ ಸರಪಳಿ ಸಿದ್ಧವಾಗುತ್ತದೆ. ಮುಂದಿನ ಹೆಚ್ಚಿನ ಮಾಹಿತಿಗಳನ್ನು ಮೀನುಗಾರಿಕಾ ಇಲಾಖೆ ಇಲ್ಲವೇ ಕೆವಿಕೆ ತಜ್ಞರಿಂದ ರೈತರು ಪಡೆದುಕೊಳ್ಳಬೇಕು.
- ನೀರಿನ ಕಳೆಗಳು ಹೆಚ್ಚಿರುವ ಕೆರೆಗಳಿಗೆ ಹುಲ್ಲು ಗೆಂಡೆ ಮೀನು ಮರಿಗಳನ್ನು ಬಿಟ್ಟು ಕಳೆ ನಿಯಂತ್ರಣವನ್ನು ಕೈಗೊಳ್ಳಬಹುದು.
- ಬೇಸಿಗೆ ಭತ್ತ ಮಾಡುವ ರೈತರು, ಭತ್ತದೊಂದಿಗೆ ಮೀನನ್ನು ಬೆಳೆಯುವ ಪದ್ಧತಿಯನ್ನು ರೂಢಿಸಿಕೊಳ್ಳುವ ಪ್ರಯತ್ನ ಮಾಡಬಹುದು. ರಾಸಾಯನಿಕ ಔಷಧಿಗಳನ್ನು ಸಿಂಪಡಿಸುವುದನ್ನು ಮಾತ್ರ ತಡೆಯಬೇಕು.

**ಬೇಸಾಯ ಶಾಸ್ತ್ರ**

**ಭತ್ತ:**

- ಭತ್ತದ ಸಸಿ ಮಡಿಯ ಬೆಳವಣಿಗೆಗಾಗಿ 17:17:17 ಅರ್ಧ ಕೆಜಿ ಗೊಬ್ಬರವನ್ನು 100 ಲೀ. ನೀರಿನಲ್ಲಿ ಕರಗಿಸಿ ಸಿಂಪಡಿಸಬೇಕು.
- ಭತ್ತದಲ್ಲಿ ಯಾಂತ್ರೀಕೃತ ನಾಟಿ ಮಾಡಿದರೆ, ಸಸಿಗಳ ಸಂಖ್ಯೆ ಮತ್ತು ಸಾಲುಗಳು ಸರಿಯಾದ ಅಂತರದಿಂದ ಅಧಿಕ ಇಳುವರಿಯನ್ನು ಪಡೆಯಬಹುದು.
- ಪ್ರತಿ ಮೂರು ಬೆಳೆಗೆ, ಒಂದು ಸಾರಿಯಂತೆ ಎಕರೆಗೆ 8 ಕೆಜಿ. ಸತುವಿನ ಸಲ್ಫೇಟ್‌ನ್ನು ($ZnSO_4$) ನಾಟಿ ಮಾಡುವಾಗ ಮಣ್ಣಿಗೆ ಹಾಕಬೇಕು.
- ಬೇಸಿಗೆ ಬೆಳೆಗೆ 50:25:25 ಕೆಜಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಪ್ರತಿ ಎಕರೆಗೆ, ಶಿಫಾರಸ್ಸು ಮಾಡಿದ ಗೊಬ್ಬರದಲ್ಲಿ ಶೇ. 50 ಸಾರಜನಕ, ಪೂರ್ತಿ ರಂಜಕ ಮತ್ತು ಶೇ. 50 ರಷ್ಟು ಪೊಟ್ಯಾಷ್‌ನ್ನು ನಾಟಿ ಮಾಡುವಾಗ ಕೊಡಬೇಕು. ಉಳಿದ ಸಾರಜನಕ ಮತ್ತು ಪೊಟ್ಯಾಷನ್ನು ಎರಡು ಸಮ ಕಂತುಗಳಲ್ಲಿ ಮೇಲುಗೊಬ್ಬರವಾಗಿ ತೆಂಡೆ (ಮರಿ) ಬರುವ ಸಮಯ ಮತ್ತು ತೆನೆ ಹೊರಗೆ ಬರುವುದಕ್ಕಿಂತ ಮುಂಚೆ (ನಾಟಿ ಮಾಡಿದ 40–50 ದಿನಗಳ ನಂತರ) ಕೊಡಬೇಕು.
- **ಜೈವಿಕ ಗೊಬ್ಬರ:** ಅಝೋಸ್ಪೈರಿಲಂ ಜೀವಾಣು ಗೊಬ್ಬರ ಬಳಸುವ ವಿಧಾನ:

  1. 800 ಗ್ರಾಂ. ಜೈವಿಕ ಗೊಬ್ಬರವನ್ನು ನೇರವಾಗಿ ನಾಟಿ ಮಾಡುವ ಪ್ರದೇಶಕ್ಕೆ ಎರಚುವುದು.
  2. ಸಸಿ ಮಡಿಯಿಂದ ಕಿತ್ತ ನಂತರ ಬೇರುಗಳನ್ನು 400 ಗ್ರಾಂ ಜೈವಿಕ ಗೊಬ್ಬರದ ಮಿಶ್ರಣದಲ್ಲಿ ಅದ್ದಿ ನಾಟಿ ಮಾಡುವುದು.

**ಶೇಂಗಾದಲ್ಲಿ ಬೆಳೆ ನಿರ್ವಹಣೆ ಕ್ರಮಗಳು:**

- ❖ ಬಿತ್ತನೆಗೆ ಮೊದಲು ಅಥವಾ ಬಿತ್ತನೆಯಾದ ಒಂದು ತಿಂಗಳ ನಂತರ ಹೆಕ್ಟೇರ್‌ಗೆ 500 ಕೆ.ಜಿ. (**Gypsum**) ಜಿಪ್ಸಂ ಉಪ್ಪನ್ನು ಮಣ್ಣಿನಲ್ಲಿ ಸೇರಿಸಿ.
- ❖ ಬಿತ್ತನೆಯಾದ 4ನೇ ವಾರದವರೆಗೆ ಅತಿಯಾಗಿ ನೀರು ಹಾಯಿಸಬಾರದು ಹಾಗೂ ಮುಂದಿನ 2 ವಾರ ಮಿತವಾಗಿ ನೀರು ಹಾಯಿಸಿ.
- ❖ ಸತು ಮತ್ತು ಬೋರಾನ್ ಕೊರತೆ ನೀಗಿಸಲು ಒಂದು ಹೆಕ್ಟೇರಿಗೆ 10 ಕೆ.ಜಿ. ಸತುವಿನ ಸಲ್ಫೇಟ್‌ನ್ನು ಸತ್ವಯುತ್ತ ಕೊಟ್ಟಿಗೆ ಗೊಬ್ಬರದ ಜೊತೆಗೆ ಬೆರೆಸಿ ಮಣ್ಣಿಗೆ ಸೇರಿಸುವುದು ಮತ್ತು ಶೇ. 0.1 ಬೋರಾಕ್ಸ್ ಲಘು ಪೋಷಕಾಂಶವನ್ನು ಹೂ ಬಿಡುವ ಸಂದರ್ಭದಲ್ಲಿ ಸಿಂಪಡಿಸುವುದರಿಂದ ಶೇಂಗಾದಲ್ಲಿ ಇಳುವರಿ ಮತ್ತು ಗುಣಮಟ್ಟ ವೃದ್ಧಿಯಾಗುತ್ತದೆ.
- ❖ 45 ದಿವಸಗಳ ನಂತರ ಅಂತರ ಬೇಸಾಯ ಮಾಡಬೇಡಿ.

**ಕುಡಿ ಸಾಯುವ ನಂಜು ರೋಗ:** ಎಲೆಗಳ ಮೇಲೆ ತಿಳಿ ಹಸಿರು ಬಣ್ಣದ ಚುಕ್ಕೆ ಕಂಡು ನಂತರ ಕುಡಿಯ ಕೆಳಭಾಗ ಮತ್ತು ಎಲೆಯ ತೊಟ್ಟಿನ ಭಾಗಕ್ಕೆ ಹರಡುತ್ತದೆ. ಗಿಡಗಳ ಬೆಳವಣಿಗೆ ಕುಂಠಿತಗೊಂಡು ಎಲೆಯ ಗಾತ್ರ ಕಡಿಮೆಯಾಗಿ ಗಿಡವು ಕುಬ್ಜವಾಗಿ ಕಾಣುತ್ತದೆ.

**ಹತೋಟಿ:** ಪ್ರತಿ4 ಸಾಲು ಶೇಂಗಾದಲ್ಲಿ 1 ಸಾಲು ಸಜ್ಜೆ ಅಥವಾ ನವಣೆ ಬೆಳೆಯಬೇಕು. ಆಸರೆ ಸಸ್ಯಗಳಾದ ಮೂಗುತಿ ಗಿಡ, ಕಡ್ಲೆ ಮುಳ್ಳು ಮತ್ತು ಇತರೆ ಕಳೆಗಳನ್ನು ನಾಶಪಡಿಸಬೇಕು. ರೋಗಗ್ರಸ್ಥ ಗಿಡಗಳನ್ನು ನಾಶಪಡಿಸಿ ಇಮಿಡಾಕ್ಲೋಪ್ರಿಡ್ 0.5 ಮಿಲೀ/ಲೀ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ಮಣ್ಣು ವಿಜ್ಞಾನ**

- ❖ ಬೆಳೆಗೆ ನೀರು ಹಾಕಿ, ಹೊಲಕ್ಕಲ್ಲ (Water to the crop, Not to the field).
- ❖ ಕರ್ನಾಟಕದಾದ್ಯಂತ ಸುಮಾರು 36,000 ಕ್ಕೂ ಮೆಲ್ಪಟ್ಟು ಕೆರೆಗಳ ಬೃಹತ್ ಜಾಲವನ್ನು ಹೊಂದಿದ್ದು ಸುಮಾರು 6.85 ಲಕ್ಷ ಹೇಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರುಣಿಸುವ ಸಾಮರ್ಥ್ಯವನ್ನು ಹೊಂದಿದೆ.

**ಕಳೆ ನಾಶಕಗಳನ್ನು ಉಪಯೋಗಿಸುವಾಗ ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳು:**

1. ಕಳೆನಾಶಕದ ಜೊತೆ ಕೊಡುವ ಪಟ್ಟಿಯಲ್ಲಿರುವ ಎಚ್ಚರಿಕೆಗಳನ್ನು ಓದಿ ತಪ್ಪದೆ ಅನುಸರಿಸಿ.
2. ಸಿಂಪರಣೆಯ ಸಮಯದಲ್ಲಿ ಕಳೆನಾಶಕದಿಂದ ಕೂಡಿದ ಗಾಳಿಯನ್ನು ಸೇವಿಸಬೇಡಿ. ಸಿಂಪರಣೆಯ ನಂತರ ಕೈಕಾಲು ಮುಖವನ್ನು ಸ್ವಚ್ಛವಾಗಿ ತೊಳೆದು ಬಟ್ಟೆಯನ್ನು ಬದಲಾಯಿಸಿ.
3. ಕಳೆನಾಶಕವನ್ನು ಮಕ್ಕಳು, ಸಾಕು ಪ್ರಾಣಿ ಹಾಗೂ ಜಾನುವಾರುಗಳಿಗೆ ಸಿಗದಂತೆ ಎಚ್ಚರವಹಿಸಿ.
4. ಆಕಸ್ಮಿಕವಾಗಿ ಕಳೆನಾಶಕ ಬಟ್ಟೆ ಅಥವಾ ಚರ್ಮದ ಮೇಲೆ ಬಿದ್ದಲ್ಲಿ ತಕ್ಷಣವೇ ಚೆನ್ನಾಗಿ ತೊಳೆಯಿರಿ.
5. ಸಿಂಪರಿಸುವಾಗ ಅಥವಾ ಸಿಂಪಡಿಸಿದ ನಂತರ ಅಸ್ವಸ್ಥತೆಯ ಸೂಚನೆಗಳು ಕಂಡುಬಂದಲ್ಲಿ ಕೂಡಲೇ ವೈದ್ಯರಿಂದ ಚಿಕಿತ್ಸೆ ಪಡೆಯಿರಿ.
6. ಕಳೆನಾಶಕಗಳನ್ನು ಉಪಯೋಗಿಸಿದ ನಂತರ ಉಳಿದ ಸೀಸ ಅಥವಾ ಡಬ್ಬಿಗಳನ್ನು ಜನ, ಪ್ರಾಣಿ ಮತ್ತು ಸಸ್ಯಗಳಿಗೆ ತೊಂದರೆಯಾಗದಂತೆ ಗುಂಡಿಯಲ್ಲಿ ಹಾಕಿ ಮುಚ್ಚಿ ಅಥವಾ ಸೂಕ್ತ ರೀತಿಯಲ್ಲಿ ವಿಸರ್ಜಿಸಿ. ನೀರು ಹರಿಯುವ ಚರಂಡಿಗಳಲ್ಲಿ ಎಸೆಯಬೇಡಿ.
7. ಸೂಚಿಸಿದ ಕಳೆನಾಶಕವನ್ನು ಮಾತ್ರ ಉಪಯೋಗಿಸಿ, ಸಿಂಪರಣೆ ಮಾಡುವಾಗ ಅಕ್ಕ ಪಕ್ಕದ ಬೆಳೆಗಳಿಗೆ ಬೀಳದಂತೆ ಎಚ್ಚರವಹಿಸಿ, ಬಿಸಿಲು ಹೆಚ್ಚಾಗಿರುವ ಸಮಯದಲ್ಲಿ ಸಿಂಪರಣೆ ಮಾಡಬೇಡಿ.
8. ಕಳೆನಾಶಕಗಳನ್ನು ಉಪಯೋಗಿಸುವುದಕ್ಕೆ ಮುಂಚೆ ನೀರಿನೊಡನೆ ಚೆನ್ನಾಗಿ ಬೆರೆಸಿ ಕಳೆಗಳ ಎಲೆಯ ಭಾಗದ ಮೇಲೆಲ್ಲಾ ಸರಿಯಾಗಿ ಬೀಳುವಂತೆ ಸಿಂಪಡಿಸಿ, ಕಳೆನಾಶಕಗಳನ್ನು ತಣ್ಣನೆಯ ಮತ್ತು ಒಣ ವಾತಾವರಣವಿರುವ ಪ್ರದೇಶಗಳಲ್ಲಿ ಶೇಖರಿಸಿಡಿ.
9. ಸಿಂಪರಣೆಯ ನಂತರ ಸಿಂಪರಕವನ್ನು ಚೆನ್ನಾಗಿ ತೊಳೆದು ಇಡಿ. ಕಳೆನಾಶಕವನ್ನು ಸಿಂಪರಣೆ ಮಾಡಲು ಪ್ರತ್ಯೇಕ ಸಿಂಪರಕ ಇಡುವುದು ಸೂಕ್ತ.

**ಅಡಿಕೆ:**

**ಹಿಂಗಾರು ಒಣಗುವ ಮತ್ತು ಎಳೆಕಾಯಿ ಉದುರುವ ರೋಗ:**

ಬೇಸಿಗೆ ತಿಂಗಳಲ್ಲಿ ರೋಗದ ಬಾಧೆ ಹೆಚ್ಚಾಗಿರುತ್ತದೆ. ಹೂ ಗೊಂಚಲ ತುದಿಯಿಂದ ಬುಡದ ಕಡೆಗೆ ಹಳದಿಯಾಗಿ ಕಂದು ಬಣ್ಣಕ್ಕೆ ತಿರುಗಿ ಎಳೆಕಾಯಿಗಳು ಹೆಚ್ಚಾಗಿ ಉದುರುತ್ತವೆ. ಹವಾಮಾನ ವೈಪರೀತ್ಯ, ಶಿಲೀಂದ್ರ, ಪೋಷಕಾಂಶ ಮತ್ತು ನೀರಿನ ಕೊರತೆ, ಹೆಚ್ಚಿನ ಉಷ್ಣಾಂಶ, ಸರಿಯಾಗಿ ಪರಾಗಸ್ಪರ್ಶ ಆಗದಿರುವುದು ಮತ್ತು ಮರದ ಶಾರೀರಿಕ ಗುಣ ಕಾಯಿ ಉದುರುವುದಕ್ಕೆ ಮುಖ್ಯ ಕಾರಣಗಳು.

**ಹಿಂಗಾರು ತಿನ್ನುವ ಹುಳು:** ಮರಿ ಕೀಟಗಳು ಹಿಂಗಾರದ ಒಳ ಹೋಗಿ ತಿನ್ನುತ್ತವೆ. ಹಿಂಗಾರು ಅರಳದೇ ಕೊಳೆಯುತ್ತವೆ, ಹೂ ಗೊಂಚಲಿನ ಹೆಣ್ಣು ಮತ್ತು ಗಂಡು ಹೂಗಳನ್ನು ತಿನ್ನುತ್ತವೆ. ಬಾಧೆಯಾದ ಹಿಂಗಾರದಲ್ಲಿ ಕೀಟದ ಹಿಕ್ಕೆ ಕಾಣುತ್ತದೆ.

**ಹತೋಟಿ:** ಹಾನಿಗೊಳಗಾದ ಹಿಂಗಾರುಗಳನ್ನು ಮರದಿಂದ ಬೇರ್ಪಡಿಸಿ ನಾಶಪಡಿಸಬೇಕು. ಬಲಿತ ಹಿಂಗಾರುಗಳನ್ನು ಕೊಕ್ಕೆಯಿಂದ ಸೀಳಿ ಕ್ಲೋರೋಪೈರಿಫಾಸ್ (2 ಮಿ.ಲೀ./ ಲೀ.) ಮತ್ತು ಡೈಥೇನ್ ಎಂ –45 (2.5 ಗ್ರಾಂ. ಲೀ.) ಬೆರಸಿ ಸಿಂಪಡಿಸಬೇಕು.

**ನುಶಿ:** ಎಲೆಗಳಿಂದ ರಸ ಹೀರುತ್ತವೆ. ಕೆಂಪು ನುಶಿಯಾದಲ್ಲಿ ಎಲೆಗಳ ಮೇಲೆ ಕೆಂಪು ಚುಕ್ಕೆಗಳು ಕಂಡು ನಂತರ ಕೈಯಿಂದ ಎಳೆದಾಗ ಕೆಂಪು ದ್ರವ ಅಂಟಿಕೊಳ್ಳುತ್ತದೆ. ಬಿಳಿ ನುಶಿಯಾದಲ್ಲಿ ಎಲೆಗಳು ಹಳದಿ ನಂತರ ಕಂದು ಬಣ್ಣಕ್ಕೆ ತಿರುಗಿ ನೀರಿನಂತ ದ್ರವ ಬೆರಳಿಗೆ ಅಂಟಿಕೊಳ್ಳುತ್ತದೆ.

**ಹತೋಟಿ :** ಗಿಡಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಒದಗಿಸಬೇಕು. ಡೈಕೊಫಾಲ್ 2.5 ಮಿಲೀ/ಲೀ ಅಥವಾ ಪ್ರೊಪಾರ್ ಗೈಟ್ 3 ಮಿ.ಲೀ./ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ಜಾನುವಾರುಗಳು:** ಜಾನುವಾರುಗಳಲ್ಲಿ ಹುಣ್ಣೆಗಳಿಗೆ ಟಿಕ್ ಟಾಕ್ ಔಷಧಿಯನ್ನು 2 ಮಿಲೀ ಪ್ರತಿ ಲೀಟರ್ ನೀರಿಗೆ ಮಿಶ್ರಣ ಮಾಡಿ ರಾಸುಗಳಿಗೆ ದೇಹದ ಎಲ್ಲಾ ಭಾಗಗಳಿಗೆ ಹಚ್ಚಿ, ನಂತರ 45 ನಿಮಿಷ ಬಿಟ್ಟು ಸ್ನಾನ ಮಾಡಿಸುವುದರಿಂದ ನಿಯಂತ್ರಿಸಬಹುದಾಗಿದೆ.

ಹೈನುರಾಸುಗಳ ಆಹಾರದಲ್ಲಿ 2 ಕಿಲೋ ಗ್ರಾಂನಷ್ಟು ಅಝೋಲ್ಲಾ ಬಳಸುವುದರಿಂದ ಹಾಲಿನ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡುವುದರ ಜೊತೆಗೆ ರಾಸುವಿನ ಆರೋಗ್ಯದಲ್ಲಿ ಸುದಾರಣೆ ಕಾಣಬಹುದಾಗಿದೆ.

ಹೈನುಗಾರಿಕೆ ಪ್ರಾರಂಭಿಸುವಂತಹ ರೈತರುಗಳು ಅಧಿಕ ಇಳುವರಿ ಮತ್ತು ಪೌಷ್ಠಿಕ ಆಹಾರ ಒದಗಿಸುವ ಮೇವಿನ ತಳಿಯಾದ ಸಂಪೂರ್ಣ (ಡಿಎಚ್‌ಎನ್– 6) ತಳಿಯನ್ನು ಬೆಳೆದುಕೊಳ್ಳುವುದು ಸೂಕ್ತ.

**ಪ್ರಧಾನ ಸಂಪಾದಕರು:** ಡಾ. ದೇವರಾಜ ಟಿ.ಎನ್.

**ಸಹ ಸಂಪಾದಕರು:** ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನಕುಮಾರ ಎನ್., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಡಾ. ಪ್ರದೀಪ್ ಹೆಚ್.ಎಂ.

**ಪ್ರಕಾಶಕರು:** ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಮುದ್ರಕರು : ಅಶ್ವಿನಿ ಪ್ರಿಂಟರ್, ದಾವಣಗೆರೆ. ಫೋ : 253341.